
## ಬಿ ಪಾಸಿಟಿವ್

### ತೆಗಳಿಕೆ ಜತೆ ಹೊಗಳಿಕೆ ಇರಲಿ

'ನನ್ನ ಕರ್ಮ ಏನ್ ಪಾಪ ಮಾಡಿ ಈ ಭೂಮಿಲ್ಲಿ ಹುಟ್ಟಿದಿನೋ, ಬಾಸ್ ಸರಿಯಿಲ್ಲ. ಏನು ಮಾಡಿದ್ರೂ ತಪ್ಪು ಎತ್ತಿ ತೋರಿಸ್ತಾರೆ, ಟೀಚರ್ಸ್ ಸರಿಯಾಗಿ ಪಾಠ ಮಾಡಿದ್ರೆ, ನಾನೆಲ್ಲೋ ಇರ್ತಿದ್ದೆ, ಅವರಿಗೆ ಏನು? ಸ್ವಂತ ಮನೆ ಇದೆ , ಕೈತುಂಬಾ ದುಡ್ಡು ಬರುತ್ತೆ, ನಮ್ಮ ತರ ಕಷ್ಟ ಪಡ್ಬೇಕಾ, ಯಾವ ಜನ್ಮದಲ್ಲಿ ಏನು ಪಾಪ ಮಾಡಿದ್ನೋ ಈ ಮನೇಲಿ ಹುಟ್ಟಿದೀನಿ, ನನ್ನ ಗಂಡ / ಹೆಂಡತಿ ಸರಿ ಇದ್ದಿದ್ರೆ, ಇತರ ಏನೂ ಕಷ್ಟ ಇರ್ತಿರ್ಲಿಲ್ಲ' ಈ ತರಹದ ಹಲವಾರು ಮಾತುಗಳನ್ನು ಕೇಳೇ ಇರುತ್ತೇವೆ. ನೋವಾದಾಗ, ಸಹಜವಾಗಿ ದುಃಖ ಪಡುವುದು ಮನುಷ್ಯನ ಗುಣ. ಸ್ವಲ್ಪ ಸಮಯ ನೋವನ್ನು ಅನುಭವಿಸಿ ಮರೆತು ಬಿಡಬೇಕು. ಇದನ್ನು ಬಿಟ್ಟು ಎಲ್ಲವನ್ನೂ ತೆಗಳುವ, ಕೊಂಕಾಡುವ ಮನಸ್ಥಿತಿಯನ್ನು ಹೊಂದಿರುತ್ತಾರೆ. ಸಂಬಂಧವಿಲ್ಲದ ಒಂದೊಂದಕ್ಕೂ ಗಂಟು ಹಾಕಿ ಸುಮ್ಮನೆ ವ್ಯಥೆ




ಪಡುತ್ತಾರೆ. ದುಃಖಿಸುತ್ತಾ ಸಮಯವನ್ನು ಹಾಳುಮಾಡುತ್ತಾರೆ. ಬೇರೆಯವರ ಯಶಸ್ಸು ಕಣ್ಣನ್ನು ಚುಚ್ಚುತ್ತದೆ. ಹೀಗೆ ಇದೇ ಮುಂದುವರಿದಾಗ ಸಮಾಜವು ಇವರನ್ನು, ದಿನಾ ಸಾಯುವವರಿಗೆ ಅಳುವವರ್ಯಾರು? ಎಂಬಂತೆ ನಿರ್ಲಕ್ಷಿಸಲು ಪ್ರಾರಂಭಿಸುತ್ತದೆ. ಮಕ್ಕಳನ್ನೂ ಅಷ್ಟೆ, ನೀನು ಸರಿಯಾಗಿ ಆಟ ಆಡೋಲ್ಲ, ಶಾಲೆ ಬಗ್ಗೆ ಆಸಕ್ತಿ ಇಲ್ಲ , ಊಟ ಮಾಡೋಕ್ಕೆ ಇನ್ನೂ ಬರಲ್ಲ , ಮಾತಾಡಬೇಕಾದರೆ ತಡವರಿಸುತ್ತಿ, ಎಂದೆಲ್ಲಾ ಮೂದಲಿಸುತ್ತಿರುತ್ತಾರೆ, ಅದರ ಬದಲಾಗಿ, ನಿನ್ನ ಕಂಡರೆ ಇಷ್ಟ ಎನ್ನುವುದು, ಊಟ ಮಾಡುವುದರ ಉದ್ದೇಶವನ್ನು ನಿಧಾನವಾಗಿ ತಿಳಿಸುವುದರಿಂದ ಮಕ್ಕಳಲ್ಲಿ ಸಕಾರಾತ್ಮಕ ಶಕ್ತಿಯನ್ನು ಬೆಳೆಸಬಹುದು.ಇದೇ ಪಾಸಿಟಿವ್ ಪೇರೆಂಟಿಂಗ್.

● ಸುಪ್ರೀತಾ ಶಾಸ್ತ್ರೀ

## ಲವ್ ಎವೆರಿ ಬಾಡಿ

ಇವತ್ತು ಆತಂಕ ಎನ್ನುವುದು ಜನರನ್ನು ಕಾಡುತ್ತಿರುವ ಸಾಮಾನ್ಯ ಸಮಸ್ಯೆ. ಬಹಳಷ್ಟು ಅಧ್ಯಯನಗಳು ವ್ಯಾಯಾಮವು ಆತಂಕದ ಲಕ್ಷಣಗಳನ್ನು ಕಡಿಮೆ ಮಾಡಲು ಸಹಾಯ ಮಾಡುತ್ತದೆ ಎಂದು ತೋರಿಸುತ್ತದೆ. ಒಂದೇ ಒಂದು ತಾಲೀಮು ತಕ್ಷಣವೇ ಮೂಡ್ ಬದುಲಿಸುತ್ತದೆ ಎಂಬುದು ಸಾಬೀತಾಗಿದೆ.



ವ್ಯಾಯಾಮ ಎಂದರೆ ಜಿಮ್ ಅಥವಾ ವಿವಿಧ ರೀತಿಯ ಎಕ್ಸರ್‌ಸೈಝ್ ಅಷ್ಟೇ ಅಲ್ಲ. ಒಂದು ವೇಗದ ನಡಿಗೆ ಅಥವಾ 30 ನಿಮಿಷಗಳ ಓಟವೂ ವ್ಯಾಯಾಮವೇ ಆಗಿದೆ. ದೈಹಿಕ ಚಟುವಟಿಕೆಯು ಎಂಡಾರ್ಫಿನ್ ಹಾರ್ಮೋನ್‌ನ ಉತ್ಪಾದನೆಯನ್ನು ಹೆಚ್ಚಿಸಲು ಸಹಾಯ ಮಾಡುತ್ತದೆ. ಇದು ನಮ್ಮ ಮನಸ್ಸಿನಲ್ಲಿರುವ ಆತಂಕ, ಗೊಂದಲವನ್ನು ಪರಿಹರಿಸುತ್ತದೆ. ಆರೋಗ್ಯ ವೃದ್ಧಿಸಿ, ಪ್ರತಿದಿನ ನಿಮ್ಮಲ್ಲಿ ಉತ್ಸಾಹ ವನ್ನು ಹೆಚ್ಚಿಸುತ್ತದೆ.

● ದೇಹಾಭಿ'ಮಾಣಿ'

## ನೀವೂ ಬರೆಯಬಹುದು


ನಮ್ಮ ವಿಳಾಸ:
ಪುರವಣಿ ವಿಭಾಗ, ನಂ.1687, ಮೂರನೇ ಮಹಡಿ, ನಿಸರ್ಗ ಸೆರೆನಿಟಿ ಕಾಂಪ್ಲೆಕ್ಸ್, ರಾಘವೇಂದ್ರ ಸ್ವಾಮಿ ಮಠದ ಹತ್ತಿರ, ಬಿಇಎಂಎಲ್ ಬಡಾವಣೆ, ರಾಜರಾಜೇಶ್ವರಿ ನಗರ, ಬೆಂಗಳೂರು-560098
ಇ-ಮೇಲ್: vishwavanimagazine@gmail.com


# ಕನ್ನಡವೆಂದರೆ ಸುಮ್ಮನಲ್ಲ! ಐದರ ಬಾಲಕಿಯ ಗಿನ್ನೆಸ್ ದಾಖಲೆ

**ಆಂಗ್ಲ ಭಾಷೆಯ ಹಾವಳಿಯಿಂದಾಗಿ ಕನ್ನಡವೆಂದರೆ ನಿರ್ಲಕ್ಷ್ಯ, ಸಾಮಾನ್ಯ. ಆದರೆ ಐದು ವರ್ಷದ ಕನ್ನಡದ ಬಾಲಕಿ ಅಧಿತ್ರಿ, ಏಳುನೂರಕ್ಕೂ ಹೆಚ್ಚು ರಸ ಪ್ರಶ್ನೆಗಳಿಗೆ ಕನ್ನಡದಲ್ಲಿಯೇ ಉತ್ತರವನ್ನು ನೀಡಿ ತನ್ನ ಹೆಸರನ್ನು ಗಿನ್ನಿಸ್ ಬುಕ್ ಆಫ್ ರೆಕಾರ್ಡ್‌ನಲ್ಲಿ ಮೂಡಿಸಿ ಕೊಂಡಿದ್ದಾಳೆ.**

ಇಂದಿನ ದಿನಗಳಲ್ಲಿ ಮಕ್ಕಳು ಕನ್ನಡವನ್ನು ಮಾತನಾಡುತ್ತಾ ರೆಂದರೆ ಪಾಲಕರಿಗೇ ಸಂಕೋಚವಾಗುತ್ತದೆ. ಕೆಲವರಿಗೆ ಇಂಗ್ಲೀಷ್‌ನಲ್ಲಿ ಮಾತನಾಡುವುದೆಂದರೆ ಸ್ಟಾಂಡರ್ಡ್ ಪ್ರಶ್ನೆ. ಆದರೆ ಮಲೆನಾಡು- ಕರಾವಳಿಯ ಕೆಲವು ಭಾಗಗಳ ಪಾಲಕರು ಮಾತ್ರ ತಮ್ಮ ಮಕ್ಕಳು ಕಾನ್ವೆಂಟ್ ಶಾಲೆ ಗಳಿಗೆ ಹೋಗುತ್ತಿದ್ದರೂ ಮಮ್ಮಿ ಡ್ಯಾಡಿ ಎಂದು ಕರೆಸಿ ಕೊಳ್ಳುವ ಸಂಪ್ರದಾಯವನ್ನು ರೂಢಿಸಿಕೊಂಡಿಲ್ಲ ಎನ್ನುವುದು ಸಂತೋಷದ ವಿಚಾರ.



**ಹೆಜ್ಜೆ ಗುರುತು**
● ಕಿಲಾರಾ ವಿಕ್ರಂ ಹೆಗಡೆ

ಬೆಳಗ್ಗೆ ಎದ್ದರೆ ಈಗಲೂ ರಂಗೋಲಿ ಹಾಕುವ ಸಂಪ್ರದಾಯ, ದೇವರ ಮುಂದೆ ಹಾಡುವ ಸಾಂಪ್ರದಾಯಿಕ ಹಾಡುಗಳು, ಮನೆಯಲ್ಲಿರುವ ಕನ್ನಡ ಸಾಹಿತ್ಯದ ಪುಸ್ತಕಗಳು, ಈಗಲೂ ಮಕ್ಕಳಿಗೆ ಹೇಳುವ ಪಂಚತಂತ್ರದ ಕತೆಗಳು, ಇವೆಲ್ಲವನ್ನು ನೋಡುತ್ತಾ, ಕೇಳುತ್ತ ಬೆಳೆಯುವ ಮಕ್ಕಳು ಕನ್ನಡದ ಮೇಲೆ ಕೀಳರಿಮೆ ಹೊಂದುವುದಕ್ಕೆ ಸಾಧ್ಯವಿಲ್ಲ. ಕನ್ನಡ ದಲ್ಲಿಯೇ ಮಾತನಾಡಿ, ತನ್ನ ಪ್ರತಿಭೆಯನ್ನು ತೋರಿಸಿ ಎರಡು ಬಾರಿ ಗಿನ್ನಿಸ್ ಬುಕ್ ಆಫ್ ರೆಕಾರ್ಡ್‌ನಲ್ಲಿ ಹೆಸರು ಮೂಡುವಂತೆ ಮಾಡಿದ ಅಧಿತ್ರಿಯ ಸ್ಪೂರ್ತಿ ದಾಯಕ ಕತೆಯನ್ನೊಮ್ಮೆ ಕೇಳಲೇಬೇಕು. ಉಪಕರಣ ಗಳ ಸಹಾಯವಿಲ್ಲದೆಯೆ ಗಣಿತದ ಸವಾಲುಗಳನ್ನು ಬಿಡಿಸಿ, ಇಂಗ್ಲೀಷ್‌ನ ಕಠಿಣ ಶಬ್ದಗಳ ಸ್ಪೆಲಿಂಗ್‌ಗಳನ್ನು ಉಚ್ಚರಿಸಿ ಗಿನ್ನಿಸ್ ಬುಕ್ ಆಫ್ ರೆಕಾರ್ಡ್‌ಲ್ಲಿ ಹೆಸರು ಪಡೆದವರಿದ್ದಾರೆ. ವಿಜ್ಞಾನದ ಫಾರ್ಮುಲಾಗಳನ್ನು ನೆನಪಿನಲ್ಲಿಟ್ಟು ಕೊಂಡು ಗಿನ್ನಿಸ್ ಬುಕ್ ಆಫ್ ರೆಕಾರ್ಡ್ ಪಟ್ಟಿಗೆ ಸೇರಿದವರಿದ್ದಾರೆ. ಆದರೆ ಶಿರಸಿ ತಾಲೂಕಿನ ಹುಣಸೆಕೊಪ್ಪ ಮೂಲದ ಈಗ ಉಡುಪಿಯಲ್ಲಿರುವ ಐದೂವರೆ ವರ್ಷದ ಅಧಿತ್ರಿ ಗಿನ್ನಿಸ್ ಬುಕ್ ಆಫ್ ರೆಕಾರ್ಡ್‌ಗೆ ಎರಡನೆಯ ಬಾರಿ ಆಯ್ಕೆಯಾಗಿರು ವುದು ಉತ್ತರ ಕನ್ನಡ- ಉಡುಪಿ ಜಿಲ್ಲೆಗೆ ಕಿರೀಟವನ್ನಿಟ್ಟಂತಾಗಿದೆ.

### ನೂರಾರು ರಸಪ್ರಶ್ನೆಗೆ ಕನ್ನಡದಲ್ಲೇ ಉತ್ತರ

**ಗಿನ್ನಿಸ್ ಬುಕ್ ಆಫ್ ರೆಕಾರ್ಡ್‌ಗೆ ಆಯ್ಕೆಯಾಗುವುದು ಸುಲಭದ ಮಾತಲ್ಲ. ಇನ್ನು ಐದೂವರೆ ವರ್ಷದ ಅಧಿತ್ರಿ ಗಿನ್ನಿಸ್ ಬುಕ್ ಆಫ್ ರೆಕಾರ್ಡ್ ನಲ್ಲಿ ಅದೂ ಎರಡನೆಯ ಬಾರಿಗೆ ಆಯ್ಕೆಯಾಗುತ್ತಾಳೆಂದರೆ ನಿಜಕ್ಕೂ ಕನ್ನಡಿಗರು ಹೆಮ್ಮೆ ಪಡಬೇಕಾದ ವಿಚಾರ. ಕರ್ನಾಟಕದ ಇತಿಹಾಸ, ರಾಜಮನೆತನಗಳು, ಜ್ಞಾನಪೀಠ ಪ್ರಶಸ್ತಿ ಪುರಸ್ಕೃತರು, ದೇವಸ್ಥಾನಗಳು, ಪ್ರಸಿದ್ಧ ಕಂಪನಿ ಗಳು, ರಾಷ್ಟ್ರಚಿಹ್ನೆಗಳು, ವಿಧಾನಸಭಾ ಕ್ಷೇತ್ರಗಳ ವಿಷಯಗಳೂ ಸೇರಿದಂತೆ ಸುಮಾರು ಏಳು ನೂರಕ್ಕೂ ಹೆಚ್ಚು ರಸಪ್ರಶ್ನೆಗಳಿಗೆ ಕನ್ನಡದಲ್ಲಿಯೇ ಉತ್ತರವನ್ನು ನೀಡಿ ತನ್ನ ಹೆಸರನ್ನು ಗಿನ್ನಿಸ್ ಬುಕ್ ಆಫ್ ರೆಕಾರ್ಡ್‌ನಲ್ಲಿ ಮೂಡಿಸಿ ಕೊಂಡಿದ್ದಾಳೆ.**




### ಸಾಮಾಜಿಕ ತಾಣಗಳಲ್ಲಿ ಭರ್ಜರಿ ಹವಾ

ಈ ಮೊದಲು ಕೇವಲ ಎರಡು ವರ್ಷವಿದ್ದಾಗ ಎಪ್ಪತ್ತಕ್ಕೂ ಹೆಚ್ಚು ಮಹಾನ್ ವ್ಯಕ್ತಿಗಳ ಫೋಟೋಗಳನ್ನು ಗುರುತಿಸುವ ಮೂಲಕ 'ಮ್ಯಾಕ್ಸಿಮಮ್ ಫೋಟೋಸ್ ಐಡೆಂಟಿಫೈಡ್ ಬೈ ಎ ಟೊಡ್ಲರ್' ಎನ್ನುವ ವಿಭಾಗದ ಅಡಿಯಲ್ಲಿ ಗಿನ್ನಿಸ್ ಬುಕ್ ಆಫ್ ರೆಕಾರ್ಡ್‌ನಲ್ಲಿ ಕಾಣಿಸಿಕೊಂಡು ಸಾಮಾಜಿಕ ಜಾಲತಾಣಗಳಲ್ಲಿ ಭರ್ಜರಿ ಹವಾ ಮಾಡಿದ್ದಳು. ತಾಯಿ ಸುಚೇತಾ ಹೆಗಡೆ ಮತ್ತು ತಂದೆ ನಾಗರಾಜ ಹೆಗಡೆಯವರು ಹೇಳುವ ಪ್ರಕಾರ, ಅಧಿತ್ರಿ ತುಂಬಾ ಚೂಟಿ ಹುಡುಗಿಯಾಗಿದ್ದು, ಯಾವುದೇ ವಿಷಯವನ್ನು ಒಮ್ಮೆ ಕೇಳಿದರೆ ಅದನ್ನು ನೆನಪಿನಲ್ಲಿಟ್ಟುಕೊಳ್ಳುವ ಸಾಮರ್ಥ್ಯವನ್ನು ಹೊಂದಿದ್ದಾಳೆ. ಇನ್ನು ಇಲ್ಲಿ ನಡೆಯುವ ಹಲವು ರೀತಿಯ ಸ್ಪರ್ಧೆಯಲ್ಲಿಯೂ ಭಾಗಿಯಾಗಿ ಈಗಾಗಲೇ ಹಲವು ಪ್ರಶಸ್ತಿಗಳನ್ನು ಪಡೆದಿದ್ದಾಳೆ. ಸಾಧನೆ ಮಾಡುವುದಕ್ಕೆ ಇಂಗ್ಲೀಷ್ ಮಾತ್ರವೇ ಸಾಧನೆಯಲ್ಲ ಎಂದು ಚಿಕ್ಕ ಹುಡುಗಿ ಪರೋಕ್ಷವಾಗಿ ತೋರಿಸಿಕೊಟ್ಟಿದ್ದಾಳೆ. ಸಣ್ಣ ವಯಸ್ಸಿ ನಲ್ಲಿಯೇ ಇಷ್ಟು ದೊಡ್ಡ ಸಾಧನೆಯನ್ನು ಮಾಡಿದ ಅಧಿತ್ರಿಗೆ ಸಲಾಂ ಎನ್ನಲೇಬೇಕು.

# ಓದಿನಲ್ಲೊಂದಾಗು ಮಂಕುತಿಮ್ಮ!

**ಪುಸ್ತಕದ ಓದು ಒಂದೊಳ್ಳೆ ಹವ್ಯಾಸ. ಈ ಓದುವಿಕೆ ವ್ಯಕ್ತಿಯಿಂದ ವ್ಯಕ್ತಿಗೆ ಭಿನ್ನ. ಅದರಲ್ಲೂ ಹಲವಾರು ಬಗೆ. ಅದು ಹೇಗೆ? ಈ ಲೇಖನ ಓದಿ.**






**ಜಗಹೃದಯ**
● ಕಾರ್ತಿಕ್ ಕೃಷ್ಣ

ಓದು ಎಂಬುದು ಮನುಜನ ದುಗುಡವ ಕಳೆಯಲು, ಮನಸನ್ನು ಅರಳಿಸಲು, ಬೌದ್ಧಿಕ ಔನ್ನತ್ಯದ ಪ್ರಾಪ್ತಿಗೆ ಇರುವ ಒಂದು ಅತ್ಯದ್ಭುತ ಸಾಧನ. ನೆಚ್ಚಿನ ಪುಸ್ತಕವನ್ನು, ಇಷ್ಟದ ಜಾಗದಲ್ಲಿ, ಮನಸ್ಸಿಗೊಪ್ಪುವ ಭಂಗಿಯಲ್ಲಿ ಕೂತು, ಅಲ್ಲಿರುವ ಒಂದೊಂದು ಸಾಲನ್ನು ಬಿಡದೆ, ಅಕ್ಷರ ಅಕ್ಷರವಾಗಿ ಜೀರ್ಣಿಸಿಕೊಂಡು, ಪುಸ್ತಕದೊಂದಿಗೆ ಒಂದಾಗುವ ಪ್ರಕ್ರಿಯೆಯೇ ಓದುವಿಕೆ . ಓದುವುದು ಒಂದು ಆಚರಣೆ. ಅದರ ರೀತಿ ನೀತಿಗಳಲ್ಲಿ ಹಲವು ಬಗೆ. ಅದು ಓದುಗನಿಂದ ಓದುಗನಿಗೆ ಬದಲಾಗುತ್ತದೆ. ಯಾಕೆಂದರೆ, ಪ್ರತಿಯೊಂದು ಓದುಗನಿಗೂ ಓದುವಿಕೆ ನೀಡುವ ಅನುಭವ ವಿಭಿನ್ನವಾದುದು ಹಾಗು ವಿಶಿಷ್ಟವಾದುದು.

ಅಮೆಚ್ಯೂರ್ ಗುಂಪು; ಕಳೆದ ತಿಂಗಳು ಒಬ್ಬ ಸ್ನೇಹಿತನನ್ನು ಭೇಟಿ ಮಾಡಿದ್ದೆ. ಫೆರಾರಿ ಮಾರಿದ ಫಕೀರ ಪುಸ್ತಕ ಹಿಡಿದು ಕೂತಿದ್ದ. ಕಳೆದ ವಾರ ಭೇಟಿಯಾದಾಗ, ಕಳೆದ ತಿಂಗಳು ಓದಿದ್ದಕ್ಕಿಂತ ಒಂದೈದು ಪೇಜು ಮುಂದೆ ಹೋಗಿದ್ದ. ಇಂದು ಮೆಸೇಜ್ ಮಾಡಿ ಎಷ್ಟು ಓದಿ ಆಯ್ತು ಅಂದದ್ದಕೆ, ಇಲ್ಲ ಮಾರಾಯ, ಯಾಕೋ ಮುಂದೇನೆ ಹೋಗ್ತಿಲ್ಲ ಅನ್ನುವ ಉತ್ತರ ಬಂತು. ಆಮೆಗತಿಯಲ್ಲಿ ಓದುವ ಈ ಓದುಗ ಪಂಗಡವನ್ನು ಆಮೆಚ್ಯುರ್ ಗುಂಪು ಎಂದು ಕರೆಯಬಹುದು.

### ರೀಡಿಂಗ್ ಗನ್

ಇನ್ನೊಂದು ಓದುಗ ವರ್ಗವಿದೆ.ಅವರು ಸಿಕ್ಕಾಪಟ್ಟೆ ಫಾಸ್ಟ್! ಬುಲೆಟ್ ಟ್ರೈನಿನಂತೆ. ಪುಸ್ತಕಗಳನ್ನು ರೋಬೋ ಸಿನಿಮಾದ ಚಿಟ್ಟಿಯಂತೆ ಸ್ಕ್ಯಾನ್ ಮಾಡಿ, ವೇಗವಾಗಿ ಓದುತ್ತಾರೆ. ಇಂದು ಯಾವುದೋ ಪುಸ್ತಕ ಹಿಡಿದು ಕೂತವರು ನಾಳೆಗೆ ಅದನ್ನು ಮುಗಿಸಿ ಇನ್ನೊಂದು ಪುಸ್ತಕದ ಹಿಂದೆ ಬಿದ್ದಿರುತ್ತಾರೆ. ಓದಿದ್ದು ನಿಜವಾಗಿಯೂ ಅರಗುತ್ತದಾ ಅಥವಾ ತಮ್ಮ ರೀಡಿಂಗ್ ಲಿಸ್ಟಲ್ಲಿ ಇರುವ ಪುಸ್ತಕಗಳನ್ನು ಓದಿ ಮುಗಿಸುವ ಆತುರವೋ! ಅಂತಹ ಓದುಗರನ್ನು ರೀಡಿಂಗ್ ಗನ್ ಎಂದು ಕರೆಯಬಹುದು.

### ಕ್ಲಿಕ್ಕಿಗರು

ಕೆಲವರಿಗೆ ತಾವು ಏನೋ ಓದುತ್ತಿದ್ದೇವೆ ಎಂದು ತೋರಿಸಿಕೊಳ್ಳುವ ಆಸೆ. ಪುಸ್ತಕವನ್ನು ಅಚ್ಚುಕಟ್ಟಾಗಿ ಜೋಡಿಸಿ, ಅದರ ಪಕ್ಕದಲ್ಲಿ ಒಂದು ಕಾಫೀ/ ಚಹಾದ ಕಪ್ಪನ್ನು ಇಟ್ಟು,ಫೋಟೋ ತೆಗೆದು, ಸೋಶಿಯಲ್ ಮೀಡಿಯಾದಲ್ಲಿ ಹರಿಬಿಟ್ಟರೆ, ಅಲ್ಲಿಗೆ ಅವರ ಓದಿನ ಪಯಣ ಅರ್ಧ ಮುಗಿದಂತೆ. ಮುಂದೆ ಯಾವಾಗಲಾದರೂ ಓದುವಂತೆ ಮನಸ್ಸು ಹಾತೊರೆದರೆ ಮಾತ್ರ. ಪುಸ್ತಕದೊಂದಿಗೆ ಇಂತಹ ಸಂಬಂಧ ಇಟ್ಟುಕೊಂಡ ಓದುಗರನ್ನು ಕ್ಲಿಕ್ಕಿಗರು ಎನ್ನಬಹುದು.



### ನಾಳಿನ ಓದುಗರು

ನಂಗೂ ಓದಬೇಕು ಅನ್ನಿಸ್ತಿದೆ. ಒಳ್ಳೆ ಪುಸ್ತಕಗಳನ್ನು ಶಿಫಾರಸು ಮಾಡು, ಎಂದು ಕೇಳುತ್ತಾರೆ. ನೀವು ಒಂದಷ್ಟು ಪುಸ್ತಕದ ಪಟ್ಟಿ ಕಳಿಸಿದರೆ, ಅವರೂ ಅದೇ ಉತ್ಸಾಹದಲ್ಲಿ ಪುಸ್ತಕದ ಅಂಗಡಿಗೆ ತೆರಳಿ ಅಷ್ಟನ್ನೂ ಖರೀದಿಸುತ್ತಾರೆ. ಅಷ್ಟೇ! ನಾಟಕದ ಮುಕ್ತಾಯ. ಯಾಕೆ ಇನ್ನೂ ಒಂದು ಪುಸ್ತಕ ಕೂಡ ಓದಿಲ್ಲ ಎಂದು ನೀವು ಕೇಳಿದರೆ, ಅತ್ತ ಕಡೆಯಿಂದ ಬರುವ ಉತ್ತರ, ಟೈಮಿಲ್ಲ. ಸಮಯ ಹೊಂದಿಸಿಕೊಂಡು ಓದು ಎಂದು ಸಲಹೆ ನೀಡಿದರೆ, ನಾಳೆಯಿಂದ ಶುರು ಮಾಡುವೆ ಎಂಬ ಪ್ರತ್ಯುತ್ತರ. ಅವರನ್ನು ನಾಳಿನ ಓದುಗರು ಎಂದು ಸಂಬೋಧಿಸುವುದು ಸೂಕ್ತ.

### ಪತ್ತೇದಾರಿ ಓದುಗ

'ಇನ್ನೂ ಕೆಲವು ಓದುಗರ ಬಳಿ ಹೋಗಿ, ನೀವೊಮ್ಮೆ ಇವರ ಪುಸ್ತಕ ಓದಬೇಕು. ಎಷ್ಟು ಚಂದ ಬರೀತಾರೆ ಗೊತ್ತಾ?' ಎಂದು ನೀವು ಮಾತಾಡಲು ಶುರು ಮಾಡಿದರೆ, 'ಹಾ, ಓದಿದ್ದೇನೆ. ಇಂತಿಂಥ ವಿಷಯ ಇಷ್ಟ ಆಯಿತು.' ಎಂದು ಉತ್ತರಿಸುತ್ತಾರೆ. ಇದುವರೆಗೆ ಹೆಸರೂ ಕೇಳಿರದ, ಅಂತದ್ದೊಂದು ಪುಸ್ತಕದ ಅಸ್ತಿತ್ವದ ಬಗ್ಗೆ ಎಳ್ಳಷ್ಟೂ ಮಾಹಿತಿ ಇಲ್ಲದ ನಿಮಗೆ, ಅಂತಹ ಹತ್ತು ಹಲವು ಪುಸ್ತಕದ ಬಗ್ಗೆ ತಿಳಿಸಿಕೊಡುತ್ತಾರೆ. ದಶಕಗಳ ಹಿಂದೆ ಮುದ್ರಣ ಕಂಡು, ಈಗ ಯಾವುದೋ ವಿಶ್ವವಿದ್ಯಾಲಯದ ಗ್ರಂಥಾಲಯದ ಆರ್ಕೈವ್‌ನಲ್ಲಿ ಬೆಚ್ಚಗೆ ಮಲಗಿರುವ ಪುಸ್ತಕಗಳ ಆನ್ಲೈನ್ ಪ್ರತಿಯನ್ನು ಹುಡುಕಿ ಕೊಡುತ್ತಾರೆ. ಇಂತಹ ಓದುಗರು ವಿರಳ, ಸಿಕ್ಕಿದರೆ ಅವರನ್ನು ಪತ್ತೇದಾರಿ ಓದುಗ ಎಂದು ಕರೆಯಿರಿ.

### ನಿಗೂಢ ಓದುಗರು

ಇವರು ಬಹುತೇಕ ಎಲ್ಲಾ ಪುಸ್ತಕಗಳನ್ನು ಓದಿರುತ್ತಾರೆ. ಆದರೆ ಅದರ ಗುಟ್ಟನ್ನುಮಾತ್ರ ಬಿಟ್ಟು ಕೊಡುವುದಿಲ್ಲ.ಅವರುಇ ಸಾಮಾಜಿಕ ಜಾಲತಾಣಗಳಲ್ಲೂ ಇರುವುದಿಲ್ಲ. ಅದೆಲ್ಲೋ ಅಜ್ಞಾತವಾಗಿ ಕೂತು, ಎಷ್ಟೋ ಪುಸ್ತಕಗಳನ್ನು ಅರಗಿಸಿಕೊಂಡು, ಹಂಚಿಕೊಳ್ಳದೆ, ಸಿಕ್ಕಿದಾಗ ಒಂದಷ್ಟು ಒಳ್ಳೆಯ ಪುಸ್ತಕಗಳ ಶಿಫಾರಸು ಮಾಡುವ ಓದುಗರೂ ಹಲವರು ಇದ್ದಾರೆ. ಅವರನ್ನು ಪ್ರೀತಿಯಿಂದ ನಿಗೂಢ ಓದುಗರು ಎನ್ನಬಹುದು.

ಓದಲು ಸಮಯವಿಲ್ಲದವರಿಗಾಗಿ/ ಕನ್ನಡವನ್ನು ಅನಾಯಾಸವಾಗಿ ಓದಲು ಆಗದವರಿಗಾಗಿ ಆಡಿಯೋ ಪುಸ್ತಕಗಳು ಸಿಗುತ್ತಿದೆ. ಒಳ್ಳೆಯ ಹಿನ್ನೆಲೆ ಸಂಗೀತದೊಂದಿಗೆ ಬರುವ ಈ ಆಡಿಯೋ ಪ್ರತಿಗಳು ನಿಮ್ಮ ಲಾಂಗ್ ಡ್ರೈವ್‌ಗಳನ್ನು ಸುಗಮಗೊಳಿಸಬಲ್ಲದು. ಟ್ರಾಫಿಕ್‌ನ ಜಂಜಾಟಕ್ಕೆ ಅಲ್ಪ ವಿರಾಮ ನೀಡಬಲ್ಲದು.

ಪುಸ್ತಕಗಳನ್ನು ಎಲ್ಲೆಂದರಲ್ಲಿ ಕೊಂಡೊಯ್ಯಲು ಆಗುವುದಿಲ್ಲ, ಓದಲು ಕಷ್ಟವಾಗುತ್ತಿದೆ ಎನ್ನುವವರಿಗೆ ಇ- ಪುಸ್ತಕಗಳು ದೊರೆಯುತ್ತಿವೆ. ಸರಿಯಾದ ಕಾಪಿರೈಟ್ ಇರುವ, ರಕ್ಷಣೆ ಇರುವ ಪುಸ್ತಕದ ಡಿಜಿಟಲ್ ಪ್ರತಿ ಇದು. ನಿಮ್ಮ ಕಪಾಟಿನಲ್ಲಿರುವ ಪುಸ್ತಕಗಳನ್ನು ಬೇರೆಯವರಿಗೆ ಎರವಲು ನೀಡಿದಂತೆ ಇ-ಬುಕ್ ಗಳನ್ನು ಎರವಲು ನೀಡಲಾಗುವುದಿಲ್ಲ. 600-700 ಪುಟಗಳ ದಪ್ಪ ಪುಸ್ತಕ ನಿಮಗೆ ಭಾರ ಎನಿಸಿದರೂ, ಅದು ನಿಮ್ಮ ಅಂಗೈಯಲ್ಲಿ ಇ-ಬುಕ್ ರೂಪದಲ್ಲಿ ಇದ್ದರೆ, ಅದನ್ನು ಎಲ್ಲಿ ಬೇಕಾದರೂ ಸಾಗಿಸಬಹುದು. ಮೊಬೈಲ್ ಜತೆಗಿದ್ದರೆ ಪುಸ್ತಕ ನಿಮ್ಮ ಬಳಿ ಇದ್ದಂತೆ.

ಒಟ್ಟಿನಲ್ಲಿ ಓದುವ ರೀತಿ ನೀತಿ ಹೇಗೆಯೇ ಇರಲಿ, ಓದುಗರ ಪರಂಪರೆ ಚಿರಸ್ಥಾಯಿಯಾಗಿರಲಿ. ಪುಸ್ತಕಗಳ ಮೇಲಿನ ಪ್ರೀತಿ ಸದಾ ಜೀವಂತವಾಗಿರಲಿ.

# ಅಮ್ಮನೇಕೆ ಅಚ್ಚುಮೆಚ್ಚು?

● ಕೆ.ಶ್ರೀನಿವಾಸರಾವ್, ಹರಪನಹಳ್ಳಿ

ನೀವು ಯಾವುದೇ ಮಕ್ಕಳನ್ನು 'ನಿನಗೆ ಅಪ್ಪ, ಅಮ್ಮನಲ್ಲಿ ಯಾರು ಇಷ್ಟ ?' ಎಂದು ಕೇಳಿ, ಬರುವ ಉತ್ತರ ನಿಸ್ಸಂದೇಹವಾಗಿ ಅಮ್ಮ . ನಿಜ, ಅಮ್ಮ ಜನುಮದಾತೆ. ಒಂಬತ್ತು ತಿಂಗಳ ಕಾಲ ಮಗು, ಅವಳ ಉದರದಲ್ಲಿ ಬೆಚ್ಚಗೆ ಬೆಳೆಯುತ್ತಾ ಅನುಬಂಧ ಬೆಳೆಸಿಕೊಂಡಿರುತ್ತದೆ. ಜನಿಸಿದ ಮರುಗಳಿಗೆ ಅದು ಮೊದಲು ನೋಡುವುದು ಅಮ್ಮನ ಮೊಗವನ್ನು. ಹೊಕ್ಕುಳಿನ ಬಳ್ಳಿ ತುಂಡಾದರೂ ಕಕ್ಕುಲತೆಯ ಲತೆ ಗಟ್ಟಿಯಾಗಿರುತ್ತದೆ. ಅಮ್ಮ ವರ್ಷಕಾಲ ಹಾಲೂಡಿಸುತ್ತಾಳೆ. ಸ್ನಾನ ಮಾಡಿಸುತ್ತಾಳೆ. ಬಟ್ಟೆ ಹಾಕಿ ಸಿಂಗರಿಸುತ್ತಾಳೆ. ಮಗುವಿಗೆ ಜ್ವರ ಬಂದರೆ ಕಲವಲಗೊಳ್ಳುತ್ತಾಳೆ. ಅದು ಅತ್ತರೆ ತಾನೂ ಅಳುತ್ತಾಳೆ. ನಕ್ಕರೆ ತಾನೂ ನಗುತ್ತಾಳೆ. ಎದೆಗವಚಿ ಮುದ್ದುಗರೆಯುತ್ತಾಳೆ. ಮಕ್ಕಳ ಉನ್ನತಿಯಲ್ಲಿ ತನ್ನ ಸಂತಸ ಕಾಣುತ್ತಾಳೆ. ಅಮ್ಮ ತ್ಯಾಗಮಯಿ. ಕ್ಷಮಯಾ ಧರಿತ್ರೀ.

ಇನ್ನು ಅಪ್ಪನ ಬಗ್ಗೆ ಹೇಳುವುದಾದರೆ ಅಪ್ಪನಿಗೂ ಮಕ್ಕಳ ಬಗ್ಗೆ ಅಪಾರ ಮಮಕಾರವಿರುತ್ತದೆ. ಹಿಮಾಲಯದ ಎತ್ತರದ ಕಕ್ಕುಲತೆ ಇರುತ್ತದೆ. ಮಕ್ಕಳ ಆಟ, ಊಟ, ಬಟ್ಟೆ, ವಿದ್ಯಾಭ್ಯಾಸಗಳಿಗಾಗಿ ಹಗಲಿರುಳು ಬೆವರು ಬಸಿದು ದುಡಿಯುತ್ತಾನೆ. ತಾನು ಹರಿದ ಬಟ್ಟೆ ಧರಿಸಿದರೂ ಮಕ್ಕಳಿಗೆ ಹೊಸ ಬಟ್ಟೆ ತರಲು ಮರೆಯನು. ತಾನು ಅರೆಹೊಟ್ಟೆ ಉಂಡು ಪತ್ನಿ ಮಕ್ಕಳಿಗೆ ಭೂರಿ ಭೋಜನ ಇಲ್ಲದೇ ಹೋದರೂ ತೃಪ್ತಿಕರ ಊಟ ಕೊಡಿಸುವನು. ಮಗಳ ವಿವಾಹ ಸಂದರ್ಭದಲ್ಲಿ ತಾನು ಅಷ್ಟು ವರ್ಷ ಕಣ್ಣ ರೆಪ್ಪೆಯಂತೆ ಸಲಹಿದ ಮುದ್ದು ಮಗಳು ತನ್ನಿಂದ ದೂರವಾಗಿ ಮತ್ತೊಂದು ಮನೆ ಬೆಳಗಲು ಹೊರಡುವುದನ್ನು ಕಂಡು ಒಂದೆಡೆ ಸಂಭ್ರಮಿಸಿದರೂ, ಇನ್ನೊಂದೆಡೆ ಮಗಳು ಮೊದಲಿನಂತೆ ಇನ್ನು ಯಾವಾ



ಗಲೂ ಕೈಗೆ ಸಿಗಳು ಎಂಬ ನಗ್ನಸತ್ಯದ ಅರಿವಾಗಿ ಛತ್ರದ ಕಂಬಗಳ ಮೂಲೆಯಲ್ಲಿ ದುಃಖ ಉಮ್ಮಳಿಸಿ ರೋದಿಸುತ್ತಾನೆ. ಅವಳು ಸದಾ ಹೇಳುತ್ತಿದ್ದ ಅಪ್ಪಾ, ನೀವೇ ನನ್ನ ಮೊದಲ ಹೀರೋ ಎಂಬ ನುಡಿ ಸದಾ ಅವನ ಕಿವಿಯಲ್ಲಿ ಅನುರಣಿಸುತ್ತಿರುತ್ತದೆ.

ಮಗನಿಗೆ ಅವನ ಉದ್ಯೋಗದಲ್ಲಿ ಮಾರ್ಗದರ್ಶನ ನೀಡುತ್ತಾನೆ. ಕುಟುಂಬದ. ಹಿತಕ್ಕಾಗಿ ಅವಿರತ ಶ್ರಮಿಸುತ್ತಾನೆ. ಆದರೆ ಅಪ್ಪ ಎಷ್ಟೇ ಮಾಡಿದರೂ ಅದೇಕೋ ಮಕ್ಕಳ ದೃಷ್ಟಿಯಲ್ಲಿ ಎಲ್ಲವೂ ನಗಣ್ಯ! ತಮ್ಮ ಮನದಳಲು ತೋಡಿಕೊಳ್ಳಲು, ಸಮಸ್ಯೆ ಹೇಳಿಕೊಳ್ಳಲು, ಅವಶ್ಯಕತೆ ಪೂರೈಸಿಕೊಳ್ಳಲು, ಸಂತಸ ಹಂಚಿಕೊಳ್ಳಲು ಎಲ್ಲಕ್ಕೂ ಅಮ್ಮನೇ ಬೇಕು. ಅಪ್ಪ ಎಂದರೆ ಆಕಾಶ ಅವನ ವ್ಯಕ್ತಿತ್ವ ಹಿಮಾಲಯದ ಎತ್ತರ ನಿಜ, ಆದರೆ ಅಮ್ಮನಷ್ಟು ಹೃದಯಕ್ಕೆ ಅಪ್ಪ ಹತ್ತಿರವಾಗಲಾರ. ಬಹುಶಃ ಇದಕ್ಕೆ ಅಪ್ಪನ ಅನಿವಾರ್ಯ ಕಠೋರ ನಡೆ ಕಾರಣವಿದ್ದೀತು. ಬದಲಾಗಿ ಅಮ್ಮನ ತ್ಯಾಗಗುಣ, ಮಮತೆ, ಪ್ರೀತಿ, ಹೃದಯದ ಭಾಷೆಗಳು ಮಕ್ಕಳಿಗೆ ಅತ್ಯಾಪ್ತವಾಗಿ ಕಾಣುವು ದರಲ್ಲಿ ವಿಶೇಷವೇನಿಲ್ಲ.



**ಬದುಕು ಜಟಕಾಬಂಡಿ**
● ವಾಗೀಶ್ ಕಟ್ಟಿ, ಗೌರಿಬಿದನೂರು

ಸಾಧ್ಯವೆಂದರೆ ಸಾಧ್ಯವೆಂದು ತೀರ್ಮಾನಿಸಿದ ವಿಶ್ವಾಮಿತ್ರನಂತಹ ಮಹಾಸಾಹಸಿ, ಹಠವಾದಿ ಮಾತ್ರ ಬ್ರಹ್ಮಋಷಿ ಆಗಲು ಸಾಧ್ಯವಾಯಿತು. ಚಾರ್ಲಿ ಚಾಪ್ಲಿನ್‌ನಂತಹ ನೋವುಗಳನ್ನುಂಡ ಬಡಕಲು ದೇಹದ ವ್ಯಕ್ತಿ ಮಾತ್ರ ತನ್ನ ಅಮೋಘವಾದ ಹಾಸ್ಯದಿಂದ ಇಡೀ ಜಗತ್ತಿನ ನೋವನ್ನು ಮರೆಸಿ, ಸುಂದರವಾದ ನಗುವಿನೆಡೆಗೆ ಕರೆದೊಯ್ಯಲು ಸಾಧ್ಯ. ಮದರ್ ತೆರೇಸಾರಂತಹ ಸಾಧಾರಣ ಹೆಣ್ಣು ಅಸಾಧಾರಣವಾದ ಸೇವೆ, ಪ್ರೀತಿ, ಅನುಕಂಪಗಳನ್ನು ನೀಡಿ ಆದರ್ಶ ಮಹಿಳೆಯಾಗಲು ಸಾಧ್ಯ. ಇವರೆಲ್ಲ ತಮ್ಮ ಸಾಧಾರಣ ಶಕ್ತಿಯನ್ನೇ ಅಸಾಧಾರಣವಾಗಿ ಬಳಸಿಕೊಂಡವರು. ಇವರೆಲ್ಲರೂ ನಮ್ಮ ನಿಮ್ಮ ಹಾಗೇ ಮನುಷ್ಯರಾದರೂ ಅವರ ಗುಣ ಸ್ವಭಾವ ಬೇರೆ ಅಷ್ಟೇ. ಸಮಸ್ಯೆಗಳನ್ನು ಎದುರಿಸುವ ಸಮಯದಲ್ಲಿ, ಇದು ನಮ್ಮಿಂದ ಸಾಧ್ಯವಿಲ್ಲ ಎಂದು ಹಿಂಜರಿಯದೆ, ಎದುರಿಸಿ, ಇದೆಲ್ಲವೂ ಸಾಧ್ಯವೆಂದು ಸಮಸ್ಯೆಯನ್ನು ದಾಟಿದ ಸಾಧಕರು. ಅವರೆಲ್ಲರೂ ನಗುನಗುತ್ತಲೇ ಕಷ್ಟವನ್ನೂ ಸಹಜವೆಂಬಂತೆ ಸ್ವೀಕರಿಸಿದರು.

ಬದುಕಿನ ಮೇಲೆ ಅನನ್ಯವಾದ ಪ್ರೀತಿ, ಆಸಕ್ತಿ, ಮಾಡುವ ಕೆಲಸದ ಮೇಲೆ ಅಭಿಮಾನವನ್ನು ಇಟ್ಟುಕೊಂಡಿರಬೇಕು. ಹಾಗೇ ಸುಮ್ಮನೆ ಈ ಲೈಫ್‌ಲ್ಲಿ ನಾವು ಮಾಡುವಂತ ಕೆಲಸದಲ್ಲಿ ಹಿನ್ನಡೆಯುಂಟಾದಾಗ, ಹಿಂಜರಿದು, ಭಯವುಂಟಾಗಿ ಮಾಡುವ ಕೆಲಸಗಳಿಂದ ಇದು ನನ್ನಿಂದ ಸಾಧ್ಯವಿಲ್ಲವೆಂದು ಹಿಂದೆ ಸರಿದುಬಿಡುತ್ತೇವೆ. ಈ ಪ್ರಪಂಚದಲ್ಲಿ ಗೆಲುವು ಸಾಧಿಸಿದವರೆಲ್ಲರ ಸತತ ಪ್ರಯತ್ನವೇ ಗೆಲುವಿನ ಗುಟ್ಟು. ಅಂತಹ ಸಾಧಕರನ್ನೇ ಸಮಾಜ ಗುರುತಿಸುತ್ತದೆ ಮತ್ತು ಗೌರವಿಸುತ್ತದೆ. ದೇವಲೋಕದಲ್ಲಿ ಅಶ್ವಿನಿ ದೇವತೆಗಳಿಗೆ, ಯಾವಾಗಲೂ ಅಸ್ತು ಎಂದು ಹೇಳುವುದೇ ಅವರ ಕೆಲಸವಂತೆ. ಹಾಗಾದರೆ ಇಂಪಾಸಿಬಲ್ ಅನ್ನುವ ಬದಲು, ಐ ಆಮ್ ಪಾಸಿಬಲ್, ಅಂತ ಹೇಳಿ ನೋಡಿ ಆಗ ಎಲ್ಲವೂ ಸಾಧ್ಯ.

ನನ್ನಿಂದ ಆಗುವುದಿಲ್ಲ ಎನ್ನುವ ಮನೋಭಾವ ಲೋಕದಲ್ಲಿ ಇದುವರೆಗೂ ಯಾರಿಗೂ ಏನನ್ನೂ ತಂದು ಕೊಡುವುದಿಲ್ಲ. ಅವರಿಗೆ ಯಾವ ಯಶಸ್ಸೂ ಸಿಗುವುದಿಲ್ಲ. ಯಾವುದಕ್ಕೂ ಒಂದು ಕೈ ನೋಡೋಣ, ಒಂದು ಪ್ರಯೋಗ ಮಾಡಿ ಬಿಡೋಣ. ಆದರಾಗಲಿ, ಇಲ್ಲದಿದ್ದರಿಲ್ಲ ಎಂಬ ದ್ವಂದ್ವ ಸ್ಥಿತಿಯಂತೂ ಯಾವುದೇ ಲಾಭವನ್ನೂ ತರುವುದಿಲ್ಲ. ಮಗು ತಂದೆ-ತಾಯಿ, ರೋಗಿ ವೈದ್ಯನನ್ನು ನಂಬುವಂತೆ, ನಮ್ಮ ಯೋಜನೆ, ಆಲೋಚನೆ, ಕನಸು, ಗುರಿಗಳನ್ನು ನಾವೇ ನಂಬಿ ಕೈ ಹಿಡಿದು ಮುಂದುವರೆಯಬೇಕು. ಛಲ ಬಿಡದ ತ್ರಿವಿಕ್ರಮನ ಮನ, ಕಣ್ಣು ಮಿಟುಕಿಸದ ಹಾಗೆ ನೇರ ಗುರಿ, ಇಟ್ಟ ಹೆಜ್ಜೆ ಹಿಂದಕ್ಕೆ ಇಡದ ಛಲ, ಗುರಿ ಮುಟ್ಟುವ ಅದಮ್ಯ ಉತ್ಸಾಹ, ಸಮಸ್ಯೆಗೆ ಅನೇಕ ಮಾರ್ಗಗಳನ್ನು ಹುಡುಕುವ ಸೃಜನಶೀಲ ಮನಸ್ಸು ಇವುಗಳೇ ಯಶಸ್ಸಿನ ಸೂತ್ರಗಳು. ಸಾಧ್ಯವಿದೆ ಎನ್ನುವುದನ್ನು ನಿಜಮಾಡಿ ತೋರುವ ಗುಣಗಳು ಮತ್ತು ಸಾಧಕನ ಅರಮನೆಯ ಗೋಪುರಗಳು, ಸಾಧ್ಯ ಎನ್ನುವ ಮನಸ್ಸಿದ್ದರೆ ಮಾರ್ಗವುಂಟಲ್ಲವೇ.




# ಆತ್ಮಬಲ ಎಂಬ ಯಶೋಮಂತ್ರ

### ಇಂಪಾಸಿಬಲ್ ಪದ ತೆಗೆದಿಡಿ

**ಪ್ರಯತ್ನಕ್ಕೆ ಮುಂಚೆ ಸಾಧ್ಯ ಎಂದುಕೊಂಡು, ಸಕಾರಾತ್ಮಕವಾಗಿ ಆಲೋಚಿಸುತ್ತಿದ್ದರೆ ಎಲ್ಲವೂ ಅಂದುಕೊಂಡಂತೆ ಆಗಿಬಿಡುತ್ತದೆ. ಆಗುವುದಿಲ್ಲ, ಇಂಪಾಸಿಬಲ್ ಎಂಬ ಪದವನ್ನೇ ನಿಘಂಟಿನಿಂದ ಕಿತ್ತೊಗೆಯಬೇಕು. ಬಲಂ ಬಲಂ ಆತ್ಮಬಲಂ, ಇದೊಂದೇ ಸಾಧ್ಯ ವಾಗಿಸುವ ಯಶೋ ಮಂತ್ರ. ಹಾಗೇ ಸುಮ್ಮನೆ ಸಾಧ್ಯ ಎನ್ನುವ ಒಂದು ಪದ ನಿಮ್ಮ ಏಕಾಗ್ರತೆ, ನಿರಂತರತೆ ಮತ್ತು ಧನಾತ್ಮಕ ಚಿಂತನೆ ಗಳನ್ನು ಹಿಗ್ಗಿಸುತ್ತದೆ. ಸೋಲಿಗೆ ಹೆದರದೆ, ಒಂದೊಂದೇ ಮೆಟ್ಟಿಲೇರುವ ಗುರಿಯತ್ತ ನಮ್ಮ ನೋಟವಿರಬೇಕು. ದೃಢ ಸಂಕಲ್ಪದೊಂದಿಗೆ ಸಾಧ್ಯವೆನ್ನುವ ದುಡಿಮೆಯೇ ಜಯದ ಅಡಿಗಲ್ಲು ಮತ್ತು ನಂಬಿಕೆಯೇ ಬುನಾದಿಯಾಗಿಸಿಕೊಂಡು ಎತ್ತರ ಎತ್ತರ ಸಾಗುತ್ತಿರ ಬೇಕು. ಸಾಧಿಸಿದವರ ಎದೆಯಲ್ಲೂ ಗೊಂದಲ ಗಳಿವೆ, ಸ್ಪರ್ಧೆಯಿದೆ, ಪೈಪೋಟಿ ಯಿದೆ, ಜಡತೆಯಿದೆ, ಬೀಳುವ ಆತಂಕವಿದೆ, ತೊಡಕು ಗಳಿವೆ, ನೋವಿದೆ, ಕತ್ತಲೆಯಿದೆ, ಸಣ್ಣತನ ಗಳಿವೆ, ಚಿಂತೆಗಳಿವೆ, ಜತೆಗೆ ಧೈರ್ಯವೂ ಇದೆ. ಹಾಗಿದ್ದೂ ಸಾಧ್ಯವೆಂಬ ಸಂಕಲ್ಪದಿಂದ ಆ ಕೆಚ್ಚನ್ನು ಎಂತಹ ಸಮಸ್ಯೆಗಳನ್ನೂ ಸಾಧ್ಯವಾಗಿಸುವ, ಗೆಲುವಿನ ಸೂತ್ರವಾಗಿಸುವ, ಸುಖ ಅರಿತವರು ಸಾಧಕರು.**